ಓ.ಎಸ್. ಃ 51/2004
ಪಿ.ಡಬ್ಲ್ಯೂ. ಃ 01

ದಿನಾಂಕಃ 10-11-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ- ಶ್ರೀ. ಸಿ.ಬಿ.ಹೆಚ್. ವಕೀಲರಿಂದ ಃ-

ಪ್ರತಿವಾದಿಯು ಕ್ರಯಕರಾರು ಪತ್ರವನ್ನು ದಾವ ಸ್ವತ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟದ್ದಾರೆಂದು ಹೇಳುತ್ತಿದ್ದೀರಾ ಅದು ಯಾವ ದಿನಾಂಕದಂದು ಎಂದರೆ? ನನಗೆ ದಿನಾಂಕ ಗೊತ್ತಾಗುವುದಿಲ್ಲ, ಇಲ್ಲಿಗೆ 31 ವರ್ಷಗಳ ಹಿಂದೆ ಆಗಿರುತ್ತದೆ. ಕ್ರಯಕರಾರು ಆಗುವ ದಿವಸವೇ ಯಾತಕ್ಕಾಗಿ ನೊಂದಾಯಿತ ಕ್ರಯಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ ಎಂದರೆ? ತುಂಡು ಭೂಮಿ ಪರಭಾರೆ ನಿಷೇಧವಿದ್ದರಿಂದ ಮಾಡಿಸಿಕೊಂಡಿರುವುದಿಲ್ಲ. ಅದು ಎಷ್ಟು ವರ್ಷದವರೆಗೆ ಕ್ರಯಪತ್ರವಾಗುವ ದಿನವರೆಗೆ ಚಾಲ್ತಿಯಲ್ಲಿತ್ತು ಎಂದರೆ 7-8 ವರ್ಷವಿತ್ತು. ತುಂಡು ಭೂಮಿ ಪರಭಾರೆ ನಿಷೇದ ಕಾಯ್ದೆ ರದ್ದು ಪಡಿಸಿದ ವರ್ಷದಿಂದ ಎಷ್ಟು ವರ್ಷ ಕಳೆದ ಮೇಲೆ ದಾವ ಸಲ್ಲಿಸಿರುತ್ತೀರಾ ಎಂದರೆ? 20 ವರ್ಷ ಆದ ನಂತರ ಸಲ್ಲಿಸಿರುತ್ತೇನೆ. ಅಷ್ಟು ವರ್ಷಗಳಲ್ಲಿ ಎಷ್ಟು ಸಲ ಪತ್ರ ಬರೆದುಕೊಡುವಂತೆ ಕೇಳಿರುತ್ತೀರಾ ಎಂದರೆ ಸುಮಾರು 10 ಸಲ ಕೇಳಿರುತ್ತೇನೆ. 10 ಸಲ ಕೇಳಿರುತ್ತೇನೆಂದು ಹೇಳಿರುತ್ತೀರಾ, ಅದರಲ್ಲಿ ಮೊದಲ ಸಲ ಯಾವಾಗ ಕೇಳಿರುತ್ತೀರಾ ಎಂದರೆ, ದಾವ ಸಲ್ಲಿಸುವ ಪೂರ್ವದಲ್ಲಿ ಕೇಳಿರುತ್ತೇನೆ.

ಆ 10 ಸಲ ಕೇಳುವಾಗ ಎಷ್ಟೇಷ್ಟು ದಿವಸಗಳ ಅಂತರವಿತ್ತು ಎಂದರೆ, ವಾರ ಹದಿನೈದು ದಿವಸಗಳ ಅಂತರವಿತ್ತು. ಕೊನೆಯ ಸಲ ಕೇಸು ಹಾಕುವ ಪೂರ್ವದಲ್ಲಿ ಎಷ್ಟು ದಿವಸಗಳ ಹಿಂದೆ ಕೇಳಿರುತ್ತೀರಾ ಎಂದರೆ? 15 ದಿವಸಗಳ ಹಿಂದೆ ಕೇಳಿರುತ್ತೇನೆ. ನಾನು 10 ಸಲ ಕೇಳಿದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ, ಆದರೆ ಪಂಚಾಯ್ತಿ ಮಾಡಿಸಿರುತ್ತೇನೆ ಹಾಗೂ ಅವರು ಒಪ್ಪಿರಲಿಲ್ಲ. ಮುಂದುವರೆದು ಜಮೀನಿನ ಮೇಲೆ ಸ್ವಾಧೀನವಿದ್ದೀರಾ ಆಗಾಗಿ ಏನು ಬರೆದುಕೊಡುವುದು ಎಂದು ಹೇಳುತ್ತಿದ್ದರು. ಮುದ್ದಹನುಮಯ್ಯ, ಇನ್ನೂಳಿದ 10-15 ಜನರು ಇದ್ದರು, ಅವರುಗಳ ಹೆಸರುಗಳು ಗೊತ್ತಿರುವುದಿಲ್ಲ. ಪಂಚಾಯಿತಿಯಲ್ಲಿ ಪ್ರತಿವಾದಿ ಕ್ರಯಪತ್ರ

ಬರೆದುಕೊಡಲು ಒಪ್ಪಿರುವುದಿಲ್ಲ ಎನ್ನಲು ಯಾವುದೇ ಬರವಣಿಗೆಯಾಗಿರುವುದಿಲ್ಲ. ಮುದ್ದಹನುಮಯ್ಯ ಹಾಗೂ ಇತರೆ 10-15 ಜನ ಸೇರಿ ಪಂಚಾಯಿತಿ ಮಾಡಿದ್ದಾರೆಂದು ಹೇಳುತ್ತಿದ್ದೀರಾ ಅದರ ನಿಖರವಾದ ದಿನ ಗೊತ್ತಿರುತ್ತದೆಯಾ ಎಂದರೆ ಇಲ್ಲ ಎನ್ನುತ್ತಾರೆ. ವಕೀಲರು ಮುಖಾಂತರ ಕಳುಹಿಸಿದ ನೋಟಿಸ್ ಹಾಗೂ ದಾವದಲ್ಲಿ ಪಂಚಾಯಿತಿ ಮಾಡಿದ ಬಗ್ಗೆ ನಮೂದಿಸಿರುತ್ತೀರಾ ಎಂದರೆ ನಮ್ಮ ವಕೀಲರಿಗೆ ಗೊತ್ತು. ಯಾವುದೇ ನಡೆಯದೇ ಇದ್ದುದರಿಂದ ಆ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ದಾವ ಸ್ವತ್ತಿನ ಚಕ್ಕುಬಂದಿಗೆ ಒಳಪಟ್ಟಿರುವ ಸ್ವತ್ತು ಪ್ರತಿವಾದಿಗೆ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳು ಇರುತ್ತವಾ, ಅವುಗಳು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಪಹಣಿಯನ್ನು ಬಿಟ್ಟರೇ ಬೇರೆ ದಾಖಲಾತಿಗಳು ಇರುವುದಿಲ್ಲ. ದಾವ ಸ್ವತ್ತಿನ ಸರ್ವೆ ನಂಬರ್ 63 ಆಗಿದ್ದು, ಅದರಲ್ಲಿ ಒಟ್ಟು 11 ಎಕರೆ 0.20 ಗುಂಟೆಯಿದ್ದು, ಒಟ್ಟು 6 ಜನ ಅನುಭವದಾರರು ಇರುತ್ತಾರೆ. ನೀವು ದಾವದಲ್ಲಿ ನಮೂದಿಸಿರುವ ಚಕ್ಕುಬಂದಿಯ ಒಳಗೆ ಬರುವ ಸ್ವತ್ತು ಪಹಣಿಯಲ್ಲಿ ನಮೂದಾಗಿರುತ್ತದೆಯಾ ಎಂದರೆ? ಅಲ್ಲಿ ಪ್ರತಿವಾದಿಗೆ ಒಡಹುಟ್ಟಿದವರಿಗೆ 3 ಎಕರೆಯಿದ್ದು ಆದರಲ್ಲಿ 1 ಎಕರೆ ನನಗೆ ಮಾರಾಟ ಮಾಡಿರುತ್ತಾರೆ. ನಿಮ್ಮ ಯಜಮಾನರ ಒಡಹುಟ್ಟಿದವರು 3 ಜನರು ಅವರಿಗೆ ಸರ್ವೆ ನಂಬರ್ 63 ರಲ್ಲಿರುವ 10 ಎಕರೆ 0.20 ಗುಂಟೆಯ ಪೈಕಿ ಎಷ್ಟು ಎಕರೆ ಬಂದಿರುತ್ತದೆಂದರೆ 5 ಎಕರೆ 0.20 ಗುಂಟೆ ಬಂದಿರುತ್ತದೆ. 5 ಎಕರೆ 0.20 ಗುಂಟೆಯನ್ನು 3 ಭಾಗಗಳಾಗಿ ಮಾಡಿದ್ದು, ಅದು ಕ್ರಮವಾಗಿ ನನ್ನ ಯಜಮಾನರಿಗೆ ಒಂದು ಭಾಗ, ನನ್ನ ಮಾವನಿಗೆ ಒಂದು ಭಾಗ, ಉಳಿದ ಭಾಗ ಪ್ರತಿವಾದಿಗೆ ಹೋಗಿರುತ್ತದೆ, ಈ ಬಗ್ಗೆ ದಾಖಲಾತಿಗಳು ಆಗಿರುವುದಿಲ್ಲ, ಬಾಯಿ ಮಾತಿನಲ್ಲಿ ವಿಭಾಗವಾಗಿರುತ್ತದೆ.

ಬಾಯಿ ಮಾತಿನಲ್ಲಿ ಸ್ವತ್ತುಗಳನ್ನು ಹಂಚಿಕೊಂಡಿದ್ದಾರೆಂದು ಹೇಳುತ್ತಿದ್ದೀರಾ ಅದಕ್ಕೂ ಪೂರ್ವದಲ್ಲಿ ಅಳತೆ ಮಾಡಿ ಹಂಚಿಕೊಂಡಿದ್ದಾರೆಯೇ ಎಂದರೆ ಇಲ್ಲ. ಕ್ರಯಕರಾರು ಪತ್ರದ ಪ್ರಕಾರ ನೀವು ಮಾಡಬೇಕಾದ ನಡವಳಿಕೆಗಳನ್ನು ಮಾಡಿದ್ದೇನೆಂದು ಹೇಳುತ್ತಿದ್ದೀರಾ ಹಾಗೂ ಸತ್ಯಕ್ಕೆ ದೂರವಾದದ್ದು ಎಂದರೆ ಸರಿಯಲ್ಲ. ಪ್ರತಿವಾದಿ ನಿಮಗೆ ಯಾವುದೇ ಕ್ರಯಕರಾರು ಪತ್ರವನ್ನು ದಾವಸ್ವತ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುವುದಿಲ್ಲ, ಹಾಗೂ ದಾವ ಸ್ವತ್ತು ನಿಮ್ಮ ಸುರ್ಪದಿಯಲ್ಲಿರುತ್ತದೆಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದಾವದಲ್ಲಿ ನಮೂದಿಸಿರುವ ಚಕ್ಕುಬಂದಿಯೂ ಸಹ ಸುಳ್ಳಿನಿಂದ ಕೂಡಿರುತ್ತದೆಂದರೆ ಸರಿಯಲ್ಲ. ನಿಪಿ-2

ಕ್ರಯಕರಾರು ಪತ್ರ ಮೇಲ್‌ನೋಟಕ್ಕೆ ಕಾಲ ವಿಳಂಬದಿಂದ ಕೂಡಿದ್ದು, ಅದರ ಆಧಾರದ ಮೇಲೆ ಯಾವುದೇ ಪರಿಹಾರ ಪಡೆಯಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ಕೇಳಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತುಂಡುಭೂ ಪರಭಾರೆ ನಿಷೇಧ ಕಾಯ್ದೆ ಇದ್ದುದರಿಂದ ಪ್ರತಿವಾದಿಗೆ ಪತ್ರ ಬರೆದುಕೊಡಲು ಅಧಿಕಾರ ಇರಲಿಲ್ಲ ಹಾಗೂ ನೀವು ಬರೆಸಿಕೊಳ್ಳಲು ಸಹ ಕಾನೂನಾತ್ಮಕ ಮನ್ನಣೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಯಜಮಾನರು ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದ ದಾವದ ಚಕ್ಕುಬಂದಿಯಲ್ಲಿ ಅವರಿಗೆ ಸೇರಿದ ದಾವಸ್ವತ್ತು ಎಂದು ನಮೂದಿಸಿರುವುದಿಲ್ಲ, ಕಾರಣ ದಾವ ಸ್ವತ್ತು ಪ್ರತಿವಾದಿಯ ಭಾಗಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ವತ್ತನ್ನು ದಾವ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ-2 ನ್ನು ಸೃಷ್ಟನೆ ಮಾಡಿ ಅದರ ರೀತ್ಯಾ ಸುಳ್ಳು ವ್ಯಾಜ್ಯ ಸೃಷ್ಟಿಸಿ ಅದರ ರೀತ್ಯಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎಂದು ಒಪ್ಪಿರುತ್ತಾರೆ,

ಅ. ಸಿ. ಜ. ಮತ್ತು ಜೆ. ಎಂ. ಸಿ. ನ್ಯಾ., ಮಾಗಡಿ.

K M ANANDA

Digitally signed by K M ANANDA
DN: cn=K M ANANDA,o=Personal,st=Karnataka,c=IN
Date: 2016.11.11 13:35:22 IST